115

## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ ಇವರು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

1. ವಸತಿ ಇಲಾಖೆಗೆ ಸಂಬಂಧಪಟ್ಟಂತೆ ಬೆಂಗಳೂರು ನಗರದ ಯಡಿಯೂರು ಕೊಳಚೆ ನಿರ್ಮೂಲನೆ ಪ್ರದೇಶದಲ್ಲಿ ಸುಮಾರು ವರ್ಷಗಳಿಂದ ವಾಸವಾಗಿದ್ದ SC/ST ಜನರ ವಾಸದ ಮನೆಯನ್ನು ನೋಟಿಸ್ ನೀಡದೆ ಒಡೆದು ಹಾಕಿರುವ ಬಗ್ಗೆ.
2. ಕಲಬುರುಗಿ ನಗರದ ನಗರಾಭಿವೃದ್ಧಿ ಪ್ರಾಧಿಕಾರ ಬಡಾವಣೆಯಲ್ಲಿ ಪಿಲ್ವರ್ ಬೆಡ್ ರೋಡ್, ಸುನೀಲ ನಗರ ಬಡಾವಣೆಯಲ್ಲಿ ವಾಸವಾಗಿರುವ 70 ವರ್ಷ ಮೇಲ್ಪಟ್ಟ SC/ST ಜನಾಂಗದವರಿಗೆ ವಾಸದ ಮನೆಯ ಹಕ್ಕುಪತ್ರ ನೀಡುವ ಬಗ್ಗೆ (ಕೊಳಚೆ ನಿರ್ಮೂಲನಾ ಮಂಡಳಿಯಿಂದ).

**ಉತ್ತರ :**

1. ಬೆಂಗಳೂರು ನಗರದ ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಸರ್ವೆ ನಂ. 53/3ರ ಯಡಿಯೂರು ಶಾಸ್ತ್ರಿನಗರ ಪ್ರದೇಶವನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ರವರು ದಿನಾಂಕ: 05-09-1989 ರಂದು ಕೊಳಚೆ ಪ್ರದೇಶವೆಂದು ಘೋಷಣೆ ಹೊರಡಿಸಿರುತ್ತಾರೆ. ಸದರಿ ಪ್ರದೇಶದ ವಿಸ್ತೀರ್ಣವು 0-33 ½ ಗುಂಟೆ ಆಗಿರುತ್ತದೆ. ಈ ಪ್ರದೇಶದಲ್ಲಿ ಸುಮಾರು ವರ್ಷಗಳಿಂದ ವಾಸವಾಗಿದ್ದ 178 ಕುಟುಂಬಗಳಿಗೆ (SC/ST ಜನಾಂಗ ಮತ್ತು ಇತರೆ ಸಾಮಾನ್ಯ ವರ್ಗ ಒಳಗೊಂಡಂತೆ) ಮಂಡಳಿಯಿಂದ ಪರಿಚಯ ಪತ್ರ ಹಾಗೂ ಬಿ.ಡಿ.ಎ ವತಿಯಿಂದ ಸ್ವಾಧೀನ ಪತ್ರ ನೀಡಲಾಗಿರುತ್ತದೆ. ಸುಮಾರು ವರ್ಷಗಳಿಂದ ವಾಸವಾಗಿರುವ 178 ಅಧಿಕೃತ ಕುಟುಂಬಗಳ ಪೈಕಿ ಯಾವುದೇ SC/ST ಜನರ ವಾಸದ ಮನೆಯನ್ನು ಒಡೆದು ಹಾಕಿರುವುದಿಲ್ಲ.

ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳ ಕಟ್ಟಡಕ್ಕೆ ಹೊಂದಿರುಕೊಂಡಿರುವಂತೆ, ಮಂಡಳಿ ಮಾಲೀಕತ್ವಕ್ಕೆ ಒಳಪಡುವ ಜಾಗದಲ್ಲಿ ಅನಧಿಕೃತ ಖಾಸಗಿ ವ್ಯಕ್ತಿಯಿಂದ ದಿನಾಂಕ : 24-12-2023 ಮತ್ತು 25-12-2023 (ಸಾರ್ವತ್ರಿಕ ರಜೆ ದಿವಸಗಳಲ್ಲಿ) ಮನೆಯ ನಿರ್ಮಾಣ ಮಾಡುತ್ತಿರುವುದಾಗಿ ಸ್ಥಳೀಯರ ದೂರವಾಣಿ ಕರೆಯಿಂದ ಕಂಡು ಬಂದಿರುವ ಹಿನ್ನಲೆಯಲ್ಲಿ ದಿನಾಂಕ: 26-12-2023 ರಂದು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರವರಿಂದ ಸ್ಥಳ ಪರಿಶೀಲನೆ ಮಾಡಲಾಗಿರುತ್ತದೆ. ಮಂಡಳಿ ಖಾಲಿ ಜಾಗದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವ ಖಾಸಗಿ ವ್ಯಕ್ತಿಯಿಂದ ಸ್ಥಳಕ್ಕೆ ಸಂಬಂಧಪಟ್ಟ ದಾಖಲೆಗಳಿದ್ದಲ್ಲಿ ಹಾಜರುಪಡಿಸುವಂತೆ ಮೌಖಿಕವಾಗಿ ಸೂಚಿಸಲಾಗಿರುತ್ತದೆ.

ಆದರೆ, ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವ ವ್ಯಕ್ತಿ ಮಂಡಳಿಯಿಂದ ನೀಡಿರುವ ಪರಿಚಯ ಪತ್ರ ಹಾಗೂ ಬಿ.ಡಿ.ಎ ವತಿಯಿಂದ ನೀಡಿರುವ ಸ್ವಾಧೀನ ಪತ್ರಗಳ ದಾಖಲೆಗಳನ್ನು ಹಾಜರುಪಡಿಸಿದೇ ಇರುವುದರಿಂದ ಅನಧಿಕೃತ ಒತ್ತುವರಿದಾರರಿಗೆ ನೋಟೀಸ್ ನೀಡಲಾಗಿರುವುದಿಲ್ಲ.

2. ಕಲಬುರಗಿ ನಗರದ ಫಿಲ್ಟರ್ ಬೆಡ್ ರೋಡ್, ಸುನೀಲ ನಗರದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ವಾಂಬೆ ಯೋಜನೆಯಡಿ ಪರಿಶಿಷ್ಠ ಜಾತಿ ಮತ್ತು ಇನ್ನಿತರ ಪರಿಶಿಷ್ಟ ಜನಾಂಗದವರಿಗೆ 46 ಮನೆಗಳನ್ನು ನಿರ್ಮಿಸಲಾಗಿದ್ದು ಮಂಡಳಿ ವತಿಯಿಂದ ಬೇಬಾಕಿ ಪತ್ರವನ್ನು ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ ವಇ 88 ಎಸ್.ಬಿ.ಎಂ 2020, ದಿನಾಂಕ:26.112020 ರಲ್ಲಿನ ಮಾರ್ಗಸೂಚಿ/ಷರತ್ತುಗಳ ಕ್ರಮ ಸಂಖ್ಯೆ:4 ರಲ್ಲಿನ ಕೊಳಚೆ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ಕಾರ್ಯವು ಆರು ತಿಂಗಳೊಳಗೆ ಪೂರ್ಣಗೊಳಿಸುವುದು ಎಂಬ ಷರತ್ತಿಗೆ ಒಳಪಟ್ಟು ಆದೇಶಿಸಿರುತ್ತದೆ. ಸರ್ಕಾರದ ಆದೇಶದಂತೆ, ಸ್ಥಳೀಯ ಸಂಸ್ಥೆಯಿಂದ ಸರ್ಕಾರಿ ಜಮೀನನ್ನು ಮಂಡಳಿಗೆ ಹಸ್ತಾಂತರಿಸಿಕೊಳ್ಳುವಲ್ಲಿ ಹಾಗೂ ಹಕ್ಕು ಪತ್ರ ವಿತರಿಸುವ ಸಲುವಾಗಿ ಸಾಮಾಜಿಕ – ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಹಾಗೂ ಫಲಾನುಭವಿಗಳು ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿರುತ್ತದೆ.

ಪ್ರಸ್ತುತ, ನಿಯಮಾನುಸಾರ ಹಕ್ಕುಪತ್ರ ವಿತರಿಸಲು ಕ್ರಮ ವಹಿಸಲಾಗುತ್ತಿದೆ.

ಸಂ :ವಇ 20 ಎಸ್‌ಬಿಎಂ 2024

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು